JULY 04, 2026

AKASHAVANI - DHARWAD

PRADESH SAMACHARA (KANNADA) 12.00 P.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಕನ್ನಡದ ಕಬೀರ ಎಂದೇ ಖ್ಯಾತಿವೆತ್ತ, ಸಂತ ಶಿಶುನಾಳ ಶರೀಫರ, ಪುಣ್ಯತಿಥಿ ಇಂದು.

ಹಾವೇರಿ ಜಿಲ್ಲೆ, ಶಿಗ್ಗಾವಿ ತಾಲೂಕು, ಶಿಶುನಾಳದಲ್ಲಿ ಹಾಗೂ ಧಾರವಾಡ ಜಿಲ್ಲೆ, ಕುಂದಗೋಳ ತಾಲೂಕಿನ ಕಳಸದಲ್ಲಿ, ಇಂದು ವಿಶೇಷ ಕಾರ್ಯಕ್ರಮಗಳು ಆಯೋಜಿತವಾಗಿವೆ.

<><><>

ನಿರಂತರ ಹರಿನಾಮ ಸ್ಮರಣೆಯೊಂದಿಗೆ, ಭಕ್ತಿ ಮಾರ್ಗ ತೋರಿದ, ಶ್ರೇಷ್ಠ ಸಂತ, ಸಂತ ನಾಮದೇವ ಮಹಾರಾಜರ ಪುಣ್ಯತಿಥಿ ಇಂದು. ಧಾರವಾಡದ ಹರಿ ಮಂದಿರ ಸೇರಿದಂತೆ, ನಾಡಿನ ವಿವಿಧೆಡೆ, ವಿಶೇಷ ಪ್ರಾರ್ಥನೆ, ಪೂಜಾ ಕೈಂಕರ್ಯ ಜರುಗಲಿವೆ.

<><><>

ಭಾರತದ ಹೆಮ್ಮೆಯ, ತ್ರಿವರ್ಣ ಧ್ವಜದ, ಮೊದಲ ಆವೃತ್ತಿಯನ್ನು ವಿನ್ಯಾಸಗೊಳಿಸಿದ, ಸ್ವಾತಂತ್ರ್ಯ ಸೇನಾನಿ, ಗಾಂಧಿವಾದಿ, ಪಿಂಗಳಿ ವೆಂಕಯ್ಯ ಅವರ ಪುಣ್ಯತಿಥಿ ಇಂದು. 1921 ರಲ್ಲಿ, ಮಹಾತ್ಮ ಗಾಂಧೀಜಿ, ವಿಜಯವಾಡಾಕ್ಕೆ ಆಗಮಿಸಿದ ಸಂದರ್ಭದಲ್ಲಿ, ತಾವು ವಿನ್ಯಾಸಗೊಳಿಸಿದ, ರಾಷ್ಟ್ರಧ್ವಜವನ್ನು ನೀಡಿ, ಅವರು ಗೌರವಾರ್ಪಿಸಿದ್ದರು.

ಪ್ರದೇಶ ಸಮಾಚಾರಕ್ಕಾಗಿ, ಈ ಕುರಿತು ಮಾಹಿತಿ ನೀಡಿದ್ದಾರೆ, ಗರಗ ಕ್ಷೇತ್ರೀಯ ಖಾದಿ ಗ್ರಾಮೋದ್ಯೋಗ ಸೇವಾ ಸಂಘದ, ಕಾರ್ಯಾಧ್ಯಕ್ಷ ಬಸವಪ್ರಭು ಹೊಸಕೇರಿ.

<><><>

ಬಸವಪ್ರಭು ಹೊಸಕೇರಿ ಧ್ವನಿ 44 ಸೆಕೆಂದುಗಳು

<><><>

ಸ್ವಾತಂತ್ರ್ಯ ಹೋರಾಟಗಾರ, ಕರ್ನಾಟಕ ಏಕೀಕರಣಕ್ಕಾಗಿ ಹೋರಾಡಿದ, ಹಿರಿಯ ಗಾಂಧಿವಾದಿ, ಕವಿ, ಲೇಖಕ, ಕಾದಂಬರಿಕಾರ, ಗೊರೂರು ರಾಮಸ್ವಾಮಿ ಅಯ್ಯಂಗಾರ ಅವರ, ಜನ್ಮದಿನೋತ್ಸವ ಇಂದು. ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಶ್ರದ್ಧಾ ಸುಮನ ಸರ್ಪಿಸಿದ್ದಾರೆ.

<><><>

ಆದ್ಯ ಪತ್ರಕರ್ತ, ಮಹರ್ಷಿ ನಾರದ ಜಯಂತಿ ಅಂಗವಾಗಿ, ಲೋಕಹಿತ ಟ್ರಸ್ಟ್ ಹಾಗೂ ವಿಶ್ವ ಸಂವಾದ ಕೇಂದ್ರ, ಧಾರವಾಡ ಜಿಲ್ಲೆ, ಹುಬ್ಬಳ್ಳಿಯ ಮುನ್ಸಿಪಲ್ ಎಂಪ್ಲಾಯಿಸ್ ಹಾಲ್‌ನಲ್ಲಿ, ಹಿರಿಯ ಪತ್ರಕರ್ತ ಮನೋಜಗೌಡ ಪಾಟೀಲ ಹಾಗೂ ದೂರದರ್ಶನದ

ಪ್ರತಿನಿಧಿ, ಕಿರಣ ಬಾಕಳೆ ಅವರನ್ನು ಇಂದು, ಸನ್ಮಾನಿಸಿ, ಗೌರವಿಸಿದವು. ಆಕಾಶವಾಣಿಯ ನಿವೃತ್ತ ಕಾರ್ಯಕ್ರಮ ನಿರ್ವಾಹಕ ದಿವಾಕರ ಹೆಗಡೆ, ಲೋಕಹಿತ ಟ್ರಸ್ಟ್ ಕಾರ್ಯದರ್ಶಿ, ಶ್ರೀಧರ ನಾಡಗೀರ ಹಾಗೂ ವಿಶ್ವಸ್ಥ ಪ್ರಭು ಉಮದಿ ಸೇರಿದಂತೆ, ಅನೇಕ ಗಣ್ಯರು ಪಾಲ್ಗೊಂಡಿದ್ದರು.

<><><>

ಮಕ್ಕಳ ಮೇಲಿನ ದೌರ್ಜನ್ಯ ಪ್ರಕರಣಗಳಲ್ಲಿ, ಸರ್ಕಾರ 'ಶೂನ್ಯ ಸಹಿ ಸ್ಣ ನೀತಿ' ಪಾಲಿಸುತ್ತಿದ್ದು, ತಪ್ಪಿತಸ್ಥರ ವಿರುದ್ಧ, ಕಠಿಣ ಕಾನೂನು ಕ್ರಮ ಕೈಗೊಳ್ಳಲಿದೆ ಎಂದು, ಗೃಹ ಖಾತೆ ಸಚಿವ ಪ್ರಿಯಾಂಕ ಖರ್ಗೆ, ಸ್ಪ ್ಟಪಡಿಸಿದ್ದಾರೆ. ಬೆಂಗಳೂರಿನ ಡೇ ಕೇರ್ ಕೇಂದ್ರವೊಂದರಲ್ಲಿ, ಮಗುವಿನ ಮೇಲಿನ ಹಲ್ಲೆ ಪ್ರಕರಣಕ್ಕೆ ಸಂಬಂಧಿಸಿ, ತೀವ್ರ ವಿ ಾದ ವ್ಯಕ್ತಪಡಿಸಿದ ಅವರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಡೇ ಕೇರ್ ಕೇಂದ್ರಗಳನ್ನು ನಡೆಸಲು, ಸ್ಪ ್ಟ ಮಾರ್ಗಸೂಚಿಗಳನ್ನು ಹೊಂದಿದೆ, ಎಂದರು.

<><><>

ಸಿವಿಲ್ ಪೊಲೀಸ್ ಪೇದೆಗಳ ನೇಮಕಾತಿಗೆ, ಆನ್‌ಲೈನ್ ಅರ್ಜಿ ಸಲ್ಲಿಕೆ ಮತ್ತು ಶುಲ್ಕ ಪಾವತಿಗೆ, 8ನೇ ತಾರೀಖು, ಸಂಜೆ ನಾಲ್ಕು ಗಂಟೆ ವರೆಗೆ ಅವಕಾಶವಿದೆ. ಉದ್ಯೋಗಾಕಾಂಕ್ಷಿಗಳು ಈಗಾಗಲೇ ಸಲ್ಲಿಸಿರುವ, ಅರ್ಜಿಗಳ ತಿದ್ದುಪಡಿಗೆ, 9ನೇ ತಾರೀಖಿನ ವರೆಗೆ, ಅವಕಾಶ ಕಲ್ಪಿಸಲಾಗಿದೆ.

<><><>

ರಾಯಚೂರು ಜಿಲ್ಲೆಯಲ್ಲಿ, ರೈತರ ಬೇಡಿಕೆಗೆ ಅನುಗುಣವಾಗಿ, ರಸಗೊಬ್ಬರಗಳನ್ನು ಕಾಲಕಾಲಕ್ಕೆ ವಿತರಿಸುವಂತೆ, ರಾಯಚೂರು ಜಿಲ್ಲೆ, ಪ್ರಕೃತಿ ವಿಕೋಪ ನಿರ್ವಹಣೆ, ತಾತ್ಕಾಲಿಕ ಮೇಲುಸ್ತುವಾರಿ ಸಚಿವ, ಡಾಕ್ಟರ್ ಶರಣಪ್ರಕಾಶ ಪಾಟೀಲ, ಕೃಷಿ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

<><><>

ಮಂಡ್ಯ ಜಿಲ್ಲೆ, ಮದ್ದೂರು ತಾಲೂಕು, ಆತಗೂರು ಕೆರೆ ಪುನರುಜ್ಜೀವನ ಕಾಮಗಾರಿಗೆ, ರಾಜ್ಯ ಗ್ರಾಮೀಣಾಭಿವೃದ್ಧಿ ಇಲಾಖೆ ಆಯುಕ್ತರಾದ, ದಿವ್ಯಾ ಪ್ರಭು ಚಾಲನೆ ನೀಡಿದರು.

<><><>

ವಿಶ್ವ ಮಾದಕ ವಸ್ತು ವಿರೋಧಿ ಕಾರ್ಯಕ್ರಮಕ್ಕೆ, ರಾಜ್ಯ ಮದ್ಯಪಾನ ಸಂಯಮ ಮಂಡಳಿ ಅಧ್ಯಕ್ಷ, ಶರಣಪ್ಪ ಸಲಾದಪುರ, ಇಂದು ಬೆಳಗ್ಗೆ 11 ಗಂಟೆಗೆ, ಬೆಂಗಳೂರಿನ ವಿಶ್ವ ಒಕ್ಕಲಿಗರ ಮಹಾ ಸಂಸ್ಥಾನ ಮಠದಲ್ಲಿ, ಚಾಲನೆ ನೀಡಿದರು.

<><><>

ಬಳ್ಳಾರಿ ಜಿಲ್ಲೆಯಲ್ಲಿ, ರಾಷ್ಟ್ರೀಯ ಪಲ್ಸ್ ಪೊಲಿಯೊ ಅಭಿಯಾನ, ಶೇಕಡ 101 ದಶಾಂಶ 2ರ ್ಟ ಪ್ರಗತಿ ಸಾಧಿಸಿದೆ ಎಂದು, ಜಿಲ್ಲಾ ಆರೋಗ್ಯಾಧಿಕಾರಿ, ಡಾಕ್ಟರ್ ಯಲ್ಲಾ ರಮೇಶಬಾಬು ಹೇಳಿದ್ದಾರೆ.

<><><>

ಪ್ರಧಾನಮಂತ್ರಿ ಬೆಳೆ ವಿಮೆ ಯೋಜನೆ ಅಡಿ, ಚಾಮರಾಜನಗರ ಜಿಲ್ಲೆಯಲ್ಲಿ, 10 ಸಾವಿರದ 595 ಜನ ರೈತರು ಹೆಸರು ನೋಂದಾಯಿಸಿದ್ದಾಗಿ, ಕೃಷಿ ಇಲಾಖೆ ಜಂಟಿ ನಿರ್ದೇಶಕ ಭಾನುಪ್ರಕಾಶ ತಿಳಿಸಿದ್ದಾರೆ.

<><><>

ಸ್ವಿಮ್ ಲೈಫ್ ಈಜು ಅಕಾಡೆಮಿಯ ನೈರಾ ಬೋಪಣ್ಣ, ಜೀ ಈಜು ಅಕಾಡೆಮಿಯ ಇಡಿಕಾ ಭಟ್, ನೆಟ್ಟಕಲ್ಲಪ್ಪ ಈಜು ಕೇಂದ್ರದ ಅವನಿ ನಲ್ಲೋಡೆ ಮತ್ತು ಬಸವನಗುಡಿ ಈಜು ಕೇಂದ್ರದ, ಕೃಷ್, ಮಂಗಳೂರಿನ ಎಮ್ಮೆಕೆರೆಯ, ವಿ–ವನ್ ಈಜು ಕೇಂದ್ರದಲ್ಲಿ ಆರಂಭಗೊಂಡ, ಎನ್.ಆರ್.ಜೆ. ಸಬ್ ಜ್ಯೂನಿಯರ್ ಈಜು ಚಾಂಪಿಯನ್‌ಶಿಪ್‌ನಲ್ಲಿ ಮಿಂಚಿದ್ದಾರೆ. ಕರ್ನಾಟಕ ರಾಜ್ಯ ಈಜು ಸಂಸ್ಥೆ

ಆಯೋಜಿಸಿರುವ, ಮೊದಲ ದಿನದ ಸ್ಪರ್ಧೆಯಲ್ಲಿ, ನಯಾರಾ 3, ಕೃಷ್, ಇಡಿಕಾ ಹಾಗೂ ಅವನಿ ತಲಾ 1 ಬಂಗಾರದ ಪದಕ, ಮುಡಿಗೇರಿಸಿಕೊಂಡರು.

<><><>

ಬೆಂಗಳೂರಿನ ಐರಿನ್ ಅನಾ ಸುಭಾಷ, ಮಂಗಳೂರಿನ ಕೊಟ್ಟಾರ, ಪುದುಕೋಡಿಯ, ಮಂಗಳೂರು ಟೇಬಲ್ ಟೆನಿಸ್ ಅಕಾಡೆಮಿಯಲ್ಲಿ ಆಯೋಜಿತ, ರಾಜ್ಯ ರ್‍ಯಾಂಕಿಂಗ್ ಟೇಬಲ್ ಟೇನಿಸ್ ಟೂರ್ನಿಯ, 15 ವರ್ಷದೊಳಗಿನವರ, ಬಾಲಕಿಯರ ವಿಭಾಗದ ಪ್ರಶಸ್ತಿ ಗೆದ್ದಿದ್ದಾರೆ. 17 ವರ್ಷದೊಳಗಿನವರ ವಿಭಾಗದಲ್ಲಿ, ಬೆಂಗಳೂರಿನ ಗೌರವ ಗೌಡ, ಪ್ರಶಸ್ತಿ ತಮ್ಮದಾಗಿಸಿಕೊಂಡರು.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.